ವಾದಿಗಳ ಪರ ಹಾಜರುಪಡಿಸಲಾದ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಿ, ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

ದಿನಾಂಕ 08.08.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿಗಳ ಪರ ವಕೀಲರಿಂದಃ-

ನಾನು ಹುಟ್ಟಿ ಬೆಳದದ್ದು ವಾದಿಯರ ಊರಿನಲ್ಲೇ ಎನ್ನುವುದು ನಿಜ. ನನಗೆ ವಾದಿಯರ ಕುಟುಂಬದ ಸಂಪೂರ್ಣ ವಿಚಾರಗಳು ಗೊತ್ತಿತ್ತು ಎನ್ನುವುದು ನಿಜ. ವಾದಿಯರು ಹಾಗೂ 1 ರಿಂದ 3 ನೇ ಪ್ರತಿವಾದಿಗಳು ಅಣ್ಣ-ತಮ್ಮಂದಿರು ಹಾಗೂ ಅಕ್ಕ-ತಂಗಿಯರು ಎನ್ನುವುದು ನಿಜ. ವಾದಿಯರು ಈ ದಾವೆಯನ್ನು ಯಾವ ಯಾವ ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾಖಲಿಸಿದ್ದಾರೆ? ಎಂದರೆ ಸಾಕ್ಷಿಯು ಸರ್ವೆ ನಂ.1/3 ರ 2 ಎಕರೆಗೆ ಹಾಗೂ ಸರ್ವೆ ನಂ.1/9 ರ 4 ಎಕರೆಗೆ ಸಂಬಂಧಿಸಿದಂತೆ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ವಾದಿಗಳು ಈ ದಾವೆಯಲ್ಲಿ ಯಾವ ಯಾವ ಸ್ವತ್ತುಗಳಳನ್ನು ಸೇರಿಸಿದ್ದಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ ಎನ್ನುವುದು ನಿಜ. ದಾವಾ ಸ್ವತ್ತುಗಳ ಚಕ್ಕುಬಂದಿ ಹೇಳಲು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಾದಿಗಳು ಹಾಗೂ 1 ರಿಂದ 3 ನೇ ಪ್ರತಿವಾದಿಗಳ ನಡುವೆ ವಿಭಾಗವಾಗಿದೆಯೇ? ಅಥವಾ ಇಲ್ಲವೇ? ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ ಎನ್ನುವುದು ನಿಜ.

2. ನನ್ನ ಲಿಖಿತ ಹೇಳಿಕೆ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿನ ವಿಚಾರಗಳ ಬಗ್ಗೆ ನಮ್ಮ ವಕೀಲರಿಗೆ ನಾನೇ ಹೇಳಿ ಬರೆಸಿರುವುದು ಎನ್ನುವುದು ನಿಜ. ನನ್ನ ಪರ ಸಲ್ಲಿಸಲಾದ ಲಿಖಿತ ಹೇಳಿಕೆಯಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ದಾವಾ

ಅನುಸೂಚಿ 4 ನೇ ಸ್ವತ್ತಾದ ಮೆಳ್ಳಹಳ್ಳಿ ಗ್ರಾಮದ ಸರ್ವೇ ನಂ.101/3 ರ 2 ಎಕರೆ ಹಾಗೂ ಅದೇ ಗ್ರಾಮದ ಸರ್ವೇ ನಂ.101/9 ರ 4 ಎಕರೆ ಒಟ್ಟು 6 ಎಕರೆ ಜಮೀನಿಗೆ ಒಟ್ಟು ಚಕ್ಕುಬಂದಿಯ ಸ್ವತ್ತನ್ನು 1 ರಿಂದ 3 ನೇ ಪ್ರತಿವಾದಿಗಳಿಂದ ನಾನು ಖರೀದಿಸಿರುವುದಾಗಿ ಬರೆಸಲಾಗಿದೆ ಎನ್ನುವುದು ನಿಜ. ಸದರಿ ಸ್ವತ್ತುಗಳು ವಾದಿಗಳ ಹಾಗೂ 1 ರಿಂದ 3 ನೇ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತುಗಳು ಎನ್ನುವುದು ನಿಜ.

3. ನನ್ನ ಲಿಖಿತ ಹೇಳಿಕೆಯ 12 ನೇ ಖಂಡಿಕೆಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣತಪತ್ರದ 3 ನೇ ಖಂಡಿಕೆಯಲ್ಲಿ ದಿನಾಂಕ 11.11.1993 ರ ನೋಂದಾಯಿತ ಅವಧಿ ಕ್ರಯಪತ್ರದ ವಿಚಾರ ಸತ್ಯವಾಗಿರುತ್ತದೆ. ನಾನು ಹಾಜರುಪಡಿಸಿರುವ ನಿಡಿ-1 ದಾಖಲೆಯ ಪುಟ ಸಂಖ್ಯೆ 4 ರಲ್ಲಿ ನಾವು "ಕ್ರಯದ ಮೊಬಗಲು 80,000/- ರೂಗಳನ್ನು ನಾವು ಈ ಲಾಗಾಯ್ತು 6 ವರ್ಷದೊಳಗೆ ನಿಮಗೆ ಪಾವತಿ ಮಾಡಿದ್ದಲ್ಲಿ ನೀವು ವಾಪಸ್ ಕ್ರಯ ಬರೆದುಕೊಡಲು ಒಪ್ಪಿರುತ್ತೀರಿ" ಎಂಬ ಒಕ್ಕಣೆ ಇದೆ ಎನ್ನುವುದು ನಿಜ. ಈ ರೀತಿ ಸದರಿ ಕ್ರಯಪತ್ರದಲ್ಲಿ ಷರುತ್ತು ವಿಧಿಸಲಾಗಿತ್ತು ಎನ್ನುವುದು ನಿಜ. ಆದ ಕಾರಣ ಸದರಿ ಕ್ರಯಪತ್ರದ ಷರುತ್ತು ಬದ್ಧ ಕ್ರಯಪತ್ರವಾಗಿದೆ ಎನ್ನುವುದು ನಿಜ. ನಿಡಿ-1 ರಲ್ಲಿ ನಿಗದಿಪಡಿಸಲಾದ 6 ವರ್ಷದೊಳಗಾಗಿ ಅಂದರೆ 1995 ರಲ್ಲಿ ವಾದಿಗಳ ಹಾಗೂ 1 ರಿಂದ 3 ನೇ ಪ್ರತಿವಾದಿಗಳ ತಂದೆ ಬೊಮ್ಮಪ್ಪ ಪೌತಿಯಾದರು ಎನ್ನುವುದು ನಿಜ. ವಾದಿಗಳ ಹಾಗೂ 1 ರಿಂದ 3 ನೇ ಪ್ರತಿವಾದಿಗಳ ತಂದೆ ಬೊಮ್ಮಪ್ಪ ಪೌತಿಯಾದ ನಂತರದಲ್ಲಿ ಒಪ್ಪಿಗೆ ಪತ್ರವನ್ನು ಬರೆದುಕೊಡುವಂತೆ ನಾನು ವಾದಿಗಳಿಗಾಗಲೀ ಅಥವಾ 1 ರಿಂದ 3 ನೇ ಪ್ರತಿವಾದಿಗಳಿಗಾಗಲೀ ಮೌಖಿಕವಾಗಿ ಕೇಳಿಲ್ಲ ಅಥವಾ ಲಿಖಿತವಾಗಿ

ನೋಟಿಸನ್ನು ಕೊಟ್ಟಿಲ್ಲ.

4. ನಿಡಿ-2 ರಂತೆ 1 ರಿಂದ 3 ನೇ ಪ್ರತಿವಾದಿಗಳು ನನ್ನ ಹೆಸರಿಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟ ವಿಚಾರ ವಾದಿಗಳಿಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ನಿಡಿ-2 ರಂತೆ ನನ್ನ ಹೆಸರಿಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಂತಹ ಸಂದರ್ಭದಲ್ಲಿ ವಾದಿಗಳ ಹಾಗೂ 1 ರಿಂದ 3 ನೇ ಪ್ರತಿವಾದಿಗಳ ತಾಯಿ ಚಿಕ್ಕಮ್ಮ ಬದುಕಿದ್ದರು ಎನ್ನುವುದು ನಿಜ. ನಾನು 7 ನೇ ತರಗತಿಯವರೆಗೆ ಓದಿದ್ದು, ಕನ್ನಡದಲ್ಲಿ ಓದಲು ಬರುತ್ತದೆ. ಈಗ ನನಗೆ ತೋರಿಸಲಾದ ನಿಡಿ-2 ದಾಖಲೆಯ 6 ಹಾಗೂ 7 ನೇ ಸಾಲಿನಲ್ಲಿ "ಪತ್ನಿ ಚಿರಾಯಿತಿ ಕಸುಬಿನ 70 ವರ್ಷವಯಸ್ಸಿನ ಶ್ರೀಮತಿ ಚಿಕ್ಕಮ್ಮ ಆದ ನಾನು ಮತ್ತು ನನ್ನ" ಎಂಬ ಪದಗಳನ್ನು ಬೆರಳಚ್ಚು ಮಾಡಿದ್ದು ಆ ನಂತರದಲ್ಲಿ ಅದನ್ನು ಕಾಟು ಮಾಡಲಾಗಿದೆ ಎನ್ನುವುದು ನಿಜ. ನಿಡಿ-2 ದಾಖಲೆಯನ್ನು ತಯಾರು ಮಾಡುವ ಸಂದರ್ಭದಲ್ಲಿ ವಾದಿಗಳ ಹಾಗೂ 1 ರಿಂದ 3 ನೇ ಪ್ರತಿವಾದಿಗಳ ತಾಯಿ ಚಿಕ್ಕಮ್ಮನನ್ನು ಸೇರಿಸಿ ಸದರಿ ದಾಖಲೆಯನ್ನು ತಯಾರಿಸಲಾಗಿದ್ದು ಆ ನಂತರದಲ್ಲಿ ಆಕೆ ಬಾರದ ಕಾರಣ ಮೇಲೆ ಹೇಳಲಾದ ಸದರಿ ದಾಖಲೆಯ 6 ಹಾಗೂ 7 ನೇ ಸಾಲುಗಳ ಪದಗಳನ್ನು ಕಾಟು ಮಾಡಲಾಗಿದೆ ಎನ್ನುವುದು ನಿಜ. ನಿಡಿ-2 ದಾಖಲೆಯನ್ನು ಮಾಡಿಕೊಳ್ಳುವ ಸಮಯಕ್ಕೆ ನಾನು ವಾದಿಗಳನ್ನು ಸದರಿ ದಾಖಲೆಯನ್ನು ಮಾಡಿಕೊಡಲು ಬರುವಂತೆ ಮೌಖಿಕವಾಗಿ ಕೇಳಿಲ್ಲ ಹಾಗೂ ಲಿಖಿತವಾಗಿ ಯಾವುದೇ ನೋಟಿಸನ್ನು ಕೊಟ್ಟಿಲ್ಲ. ನಿಡಿ-2 ದಾಖಲೆಯನ್ನು ಮಾಡಿಕೊಳ್ಳುವಾಗ ಸದರಿ ದಾಖಲೆಯನ್ನು ಮಾಡಿಕೊಡಲು ಬರುವಂತೆ ವಾದಿಗಳನ್ನು ಕರೆಯದೇ 1 ರಿಂದ 3 ನೇ ಪ್ರತಿವಾದಿಗಳೊಂದಿಗೆ ಶರೀಕಾಗಿ

ಸದರಿ ದಾಖಲೆಯನ್ನು ಮಾಡಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ.

5. ನಿಡಿ-2 ರ ಪುಟ ಸಂಖ್ಯೆ 2 ರಲ್ಲಿ 2 ನೇ ಸಾಲಿನಲ್ಲಿ ಹೇಳಲಾದ 2,000/- ರೂಗಳನ್ನು ನಾನು ಕೇವಲ 1 ರಿಂದ 3 ನೇ ಪ್ರತಿವಾದಿಗಳಿಗೆ ಪಾವತಿಸಿದ್ದೇನೆ ಎನ್ನುವುದು ನಿಜ. ನಿಡಿ-2 ನ್ನು ಮಾಡಿಕೊಳ್ಳಲಾದ ವಿಚಾರ ಹಾಗೂ ಸದರಿ ದಾಖಲೆಯಡಿಯಲ್ಲಿ 1 ರಿಂದ 3 ನೇ ಪ್ರತಿವಾದಿಗಳಿಗೆ 2,000/- ರೂಗಳು ಪಾವತಿಯಾದ ವಿಚಾರ ನಾನು ವಾದಿಗಳಿಗೆ ತಿಳಿಸಿರುವುದಿಲ್ಲ ಎನ್ನುವುದು ನಿಜ, ಸಾಕ್ಷಿಯು ಮುಂದುವರೆದು ಅವರಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-1 ಮತ್ತು ನಿಡಿ-2 ರಂತೆ ದಾಖಲೆಗಳು ಆದಂತಹ ವಿಚಾರಗಳು ಹಾಗೂ ನಿಡಿ-2 ರಲ್ಲಿ ಕಾಣಿಸಲಾದ ಹಣದ ವಿಚಾರ ವಾದಿಗಳಿಗೆ ಗೊತ್ತಿಲ್ಲದಿದ್ದರೂ ಸಹ ಅವರಿಗೆ ಸದರಿ ವಿಚಾರ ಗೊತ್ತಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಈ ಹಂತದಲ್ಲಿ ವಾದಿಗಳ ಪರ ವಕೀಲರ ಮನವಿಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.